ದಿನಾಂಕ 22.10.2016 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಬಿಜಿಎಸ್ ವಕೀಲರಿಂದಃ

ವ್ಯಾಜ್ಯ ಭೂಮಿಗಳ ಸರ್ವೆ ನಂಬರ್‌ಗಳು ಈಗ ನೆನಪಿಲ್ಲ. ವ್ಯಾಜ್ಯ ಭೂಮಿಗಳ ಸರ್ವೆ ನಂಬರ್‌ಗಳ ಮಾಹಿತಿಯನ್ನು ವಕೀಲರಿಗೆ ಅಣ್ಣ ಕೊಟ್ಟಿರುತ್ತಾರೆ.ವ್ಯಾಜ್ಯ ಬಾಬ್ತು ಕ್ರಯಪತ್ರನೋಡಿದ್ದೇನೆ. ಆಗ ಅದರ ಸರ್ವೆ ನಂಬರ್ ನೋಡಿರುತ್ತೇನೆ. ಆದರೆ ಈಗ ನೆನಪಿಲ್ಲ. ಸರ್ವೆ ನಂ.71಼1 1 ಎಕರೆ 44 ಸೆಂಟ್ಸ್, 71಼2ಎ 1 ಎಕರೆ 65 ಸೆಂಟ್ಸ್ ವ್ಯಾಜ್ಯದ ಸರ್ವೆ ನಂಬರ್‌ಗಳು ಎಂದರೆ ಸರಿ. ಸಾಕ್ಷಿಗೆ 68-69 ಮತ್ತು 95-96 ರ ಕೈಬರಹ ಪಹಣಿಗಳನ್ನು ತೋರಿಸಿ ಸಾಕ್ಷಿ ಒಪ್ಪಿದ್ದು ಸದ್ರಿ 3 ಪುಟಗಳನ್ನು ಅರ್‌ಟಿಸಿಯನ್ನು ನಿಡಿ-2 ಎಂದೂ, 3 ಪುಟಗಳನ್ನು ಅರ್‌ಟಿಸಿಯನ್ನು ನಿಡಿ-3 ಎಂದು ಗುರ್ತಿಸಲ್ಯಾತು. ಖರೀದಿ ಮಾಡಿದಾಗಿನಿಂದ ಪಹಣಿ ಪತ್ರಿಕೆಗಳು ನನ್ನ ಸಹೋದರ ಶ್ಯಾಮಭಟ್ ರವರ ಹೆಸರಿನಲ್ಲಿಯೇ ಇದೆ ಎಂದರೆ ಸರಿ.

3ನೇ ಪ್ರತಿವಾದಿಯ ಮದುವೆ ಊರಿನಲ್ಲಿಯೇ ಆಗಿರುತ್ತದೆ. ಮದುವೆಗೆ ಸಾಲ ತೆಗೆದುಕೊಂಡಿರುತ್ತೇವೆ. ಅದರ ಬಗ್ಗೆ ದಾಖಲೆ ಇದೆಯೇ ಎಂದರೆ ನನಗೆ ಗೊತ್ತಿಲ್ಲ ಅಣ್ಣನಿಗೆ ಗೊತ್ತಿದೆ ಎಂದು ಹೇಳುತ್ತಾರೆ. ನಾನು ಸಾಕ್ಷಿಯನ್ನು ಎಲ್ಲಾ ವಾದಿಗಳ ಪರವಾಗಿ ಕೊಡುತ್ತಿದ್ದೇನೆ. ನಾನು ನನ್ನ ಅಣ್ಣನ ಬಳಿ ಸಾಲ ಯಾರಿಂದ ಎಷ್ಟು ಪಡೆದುಕೊಂಡಿರುತ್ತೀರಿ ಎಂದು ಕೇಳಿರುವುದಿಲ್ಲ. ಅದಕ್ಕೆ ದಾಖಲೆಗಳು ಇವೆಯಾ ಎಂದು ಕೇಳಿರುತ್ತೇನೆ. ದಾಖಲೆ ಇದೆಎಂದು ಹೇಳಿರುತ್ತಾರೆ. ಆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬೇಕೆಂದು ಕೇಳಿಲ್ಲ. ಆ ದಾಖಲೆಗಳನ್ನು ನಾನುನೋಡಿಲ್ಲ. ಅವುಗಳನ್ನು ಯಾರು ಬರೆದುಕೊಟ್ಟಿದ್ದಾರೆಂದು ಗೊತ್ತಿಲ್ಲ. 3ನೇ ಪ್ರತಿವಾದಿ ಮದುವೆಗೆ ಸಾಲ ಪಡೆದೇಕೊಡಿಲ್ಲ ಎಂದರೆ ನನಗೆ ಹೇಳಲು ಬರುವುದಿಲ್ಲ ಎಂದು ಹೇಳುತ್ತಾರೆ. ಆ ಸಾಲವನ್ನು ಮರುಪಾವತಿ ಮಾಡಿದ್ದೇವೆ. ಎಷ್ಟು ಸಮಯದಲ್ಲಿ ಮಾಡಿದ್ದೇವೆ ಎಂದು ಗೊತ್ತಿಲ್ಲ. ಯಾರಿಗೆ ಮರುಪಾವತಿ ಮಾಡಿದ್ದೇವೆ, ಎಷ್ಟು ಮೊತ್ತ ಸಾಲ ಪಡೆದುಕೊಂಡಿದ್ದೇವೆ ಎಂದು ನೆನಪಲ್ಲ. ಮರುಪಾವತಿ ಮಾಡಿದ ಬಗ್ಗೆ ದಾಖಲೆಗಳು ಇರುವುದು ನನಗೆ ಗೊತ್ತಿಲ್ಲ. ಸಾಲ ತೆಗೆದುಕೊಂಡಿರುವುದು ಎಂಬುದು ಸುಳ್ಳು ಎಂದರೆ ಹೇಳಲಿಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ.

ಸಾಕ್ಷ್ಯ ಪ್ರಮಾಣಪತ್ರಿಕೆಯಲ್ಲಿ ಹೇಳಿರುವ ವಿಷಯದ ಬಗ್ಗೆ ಉಳಿದ ವಾದಿಗಳಿಗೆ ಗೊತ್ತಿದೆ. ಈ ವ್ಯಾಜ್ಯದಲ್ಲಿ ಎದುರುದಾರರು ಏನು ಸಾಧನೆ ಮಾಡುತ್ತಿದ್ದಾರೆಂದು ನಾನು ಸ್ವತೀ ಅನುಭವ ಮಾಡಿಕೊಂಡಿದ್ದೇನೆ. ಹಾಗೂ ಇತರ ವಾದಿಗಳಿಗೆ ಮಾಹಿತಿ ಇರುತ್ತದೆ.

ನಾನು 30.9.1952ರಲ್ಲಿ ಹುಟ್ಟಿರುತ್ತೇನೆ. ನನ್ನ ತಂದೆ 1973ನೇ ಇಸವಿಯವರೆಗೂ ಜೀವಂತ ಇದ್ದರು. ನನ್ನ ತಂದೆ ಶಾಲೆಯಲ್ಲಿ ಮಾಸ್ಟರ್ ಆಗಿದ್ದರು. ಅವರಿಗೆ ಸಂಬಳ ಎಷ್ಟು ಬರುತ್ತಿತ್ತುಎನ್ನುವ ಬಳಿ ದಾಖಲೆ ಇಲ್ಲ. ತಿಂಗಳಿಗೆ ರೂ.100 ಸಂಬಳ ಬರುತ್ತಿತ್ತು. 1936ನೇಇ ಸವಿಯಲ್ಲಿ ತಂದೆಯವರು ಕೆಲಸಕ್ಕೆ ಸೇರಿರುತ್ತಾರೆ. 100 ರೂ ಆ ಕಾಲಕ್ಕೆ ಬಹಳ ದೊಡ್ಡ ಮೊತ್ತ ಎಂದರೆ ಸರಿ. ತಂದೆ ಎಲ್ಲಾ ಮಕ್ಕಳನ್ನು ಸಾಕಿ ಸಲಹಿದ್ದು ಅದೇ ಉತ್ಪತ್ತಿಯಿಂದ ಎಂದರೆ ಸರಿ. ತಂದೆಯವರಿಗೆ ಅವರ ಕುಟುಂಬವನ್ನು ಸಾಕಿ ಸಲಹಲು ತೊಂದರೆ ಇತ್ತು. ಯಾವ ಇಸವಿಯಲ್ಲಿ ತಂದೆಯವರಿಗೆ ತೊಂದರೆ ಇತ್ತು ಎಂದು ನನಗೆ ನೆನಪಿಲ್ಲ. ಏನು ತೊಂದರೆ ಇತ್ತು ಎಂದು ಸಹಾ ನನಗೆ ನೆನಪಿಲ್ಲ. ಏನು ತೊಂದರೆ ಇತ್ತು ಎಂಬ ಕುರಿತಾಗಿ ಮಾಹಿತಿ ಇಲ್ಲ. ನಾನು ಚಿಕ್ಕವನಿದ್ದಾಗ ತಂದೆ ಹೇಳಿರುತ್ತಾರೆ. ನನ್ನ ತಂದೆ ಈಗ್ಗೆ 55 ವರ್ಷದ ಮುಂಚೆ ತೊಂದರೆ ಇತ್ತು ಎಂದು ಹೇಳಿರುತ್ತಾರೆ. ಏನು ತೊಂದರೆ ಎಂದು ತಂದೆಯವರು ಹೇಳಿದ್ದಾರೆಂದು ಈಗ ನೆನಪಿಲ್ಲ. ನನ್ನ ಸಹೋದರರ ಬಳಿ ತೊಂದರೆ ಬಗ್ಗೆ ತಿಳಿಸಿದ್ದಿಲ್ಲ. ತಂದೆ ಸಾಯುವಾಗ 5 ಜನ ಮಕ್ಕಳ ಮದುವೆ ಬಾಕಿ ಇತ್ತು. 2, 3 ಮತ್ತು 4ನೇ ವಾದಿಯವರಿಗೆ ಮದುವೆ ಆಗಿರಲಿಲ್ಲ. 6ನೇ ವಾದಿಗೆ ಮದುವೆ ಈಗಲೂ ಅಗಿಲ್ಲ. 5ನೇ ವಾದಿಗೆ ನನಗಿಂತ ಮುಂಚೆ ಮದುವೆ ಆಗಿರಲಿಲ್ಲ. 2ನೇ ವಾದಿ ಮದುವೆ 1976-77ರಲ್ಲಿ ಅಗಿರುತ್ತದೆ. 3ನೇ ಮದುವೆ ಯಾವಾಗ ಅಗಿತ್ತು ಎಂದು ನೆನಪಿಲ್ಲ. ನನ್ನ ಮದುವೆ 85ನೇ ಇಸವಿಯಲ್ಲಿ ಆಗಿರುತ್ತದೆ. ಎಲ್ಲಾ ವಾದಿಗಳಿಗೂ ಮದುವೆ ಅಗುವ ಸಮಯಕ್ಕೆ ಅವರದ್ದೇ ಆದ ಕೆಲಸ ಇತ್ತು. ನಾನು ಮದುವೆ ಆಗುವ ಕಾಲಕ್ಕೆ ವೈದ್ಯ ವೃತ್ತಿಯನ್ನು ಮೈಸೂರಿನಲ್ಲಿ ಮಾಡುತ್ತಿದ್ದೆನು. ಆ ಸಮಯಕ್ಕೆ ವೈದ್ಯ ವೃತ್ತಿ ಪ್ರಾರಂಭಿಸಿ 6 ವರ್ಷ ಆಗಿತ್ತು ನನ್ನಸ್ವಂತ ಕ್ಲೀನಿಕ್ ಇತ್ತು. ಅಲ್ಲಿ ನನಗೆ ಸ್ವಂತ ಮನೆ ಇರಲಿಲ್ಲ. ನಂತರ ಮಾಡಿರುತ್ತೇನೆ. ವೈದ್ಯ ವೃತ್ತಿಯಲ್ಲಿ ಸಾಧಾರಣ ಉತ್ಪತ್ತಿ ಇತ್ತು. ವೈದ್ಯ ವೃತ್ತಿ ಪ್ರಾರಂಭಿಸಿದ್ದಾಗಿನಿಂದ ನಾನು ಅದಾಯ ತೆರಿಗೆ ಪಾವತಿಸುತ್ತಿದ್ದೇನೆ. 1 ಮತ್ತು 2ನೇ ವಾದಿಗಳಿಗೂ ಸಹಾ ಅವರದ್ದೇ

ಅದ ಉತ್ಪತ್ತಿಗಳು ಇದ್ದವು. ಅಣ್ಣ ತಮ್ಮಂದಿರು ಜೀವನ ನಿರ್ವಹಣೆ ಮಾಡಲು ಒಬ್ಬರಿಗೊಬ್ಬರು ಅವಲಂಬಿಸಿರಲಿಲ್ಲ. ಸಾಕ್ಷಿ ಸ್ವತಃ ಒಬ್ಬರಿಗೊಬ್ಬರು ಸಹಾಯ ಮಾಡುತ್ತಿದ್ದರು ಎಂದು ಹೇಳುತ್ತಾರೆ. ಅಣ್ಣ ತಮ್ಮಂದಿರಿಗೆ ಸಾಧಾರಣವಾಗಿ ಸಹಾಯಮಾಡುವುದು ಲೋಕರೂಢಿ ಎಂದರೆ ಸರಿ.

1ನೇ ವಾದಿ 1959ನೇ ಇಸವಿಯಲ್ಲಿ ಭೌತಶಾಸ್ತ್ರ ಪ್ರಾಧ್ಯಾಪಕರಾಗಿದ್ದರು. ತಂದೆ 1965ನೇ ಇಸವಿಯಲ್ಲಿ ನಿವೃತ್ತಿ ಹೊಂದಿರುತ್ತಾರೆ. ತಂದೆ ಇರುವಾಗಲೇ ಎಲ್ಲಾ ಮಕ್ಕಳ ವಿಧ್ಯಾಭ್ಯಾಸ ಆಗಿರಲಿಲ್ಲ. ನನ್ನದು ಮತ್ತು ವಿಷ್ಣುಭಟ್ ರವರ ವಿಧ್ಯಾಭಾಸ್ಯ ಅಗಿರಲಿಲ್ಲ. ಉಳಿದವದ್ದು ಎಲ್ಲಾ ಅಗಿತ್ತು. ಅಣ್ಣ ತಮ್ಮಂದಿರಿಗೆ ಎಷ್ಟು ಉತ್ಪತ್ತಿ ಬರುತ್ತಿತ್ತುಎಂದು ನನಗೆ ಮಾಹಿತಿ ಇಲ್ಲ. ವಾದಿಗಳೆಲ್ಲಾ ಆದಾಯ ತೆರಿಗೆ ಪಾವತಿ ಮಾಡುತ್ತಿದ್ದಾರೆ. 1ನೇ ವಾದಿಯನ್ನು ಉಳಿದ ವಾದಿಗಳು ಅವಲಂಬಿಸುತ್ತಿದ್ದರು ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ಮಣಿಪಾಲದಲ್ಲಿ ಕೆಲಸ ಮಾಡುತ್ತಿದ್ದರು. ಆ ಸಮಯದಲ್ಲಿ ಇಬ್ಬರು ಮೂವರು ಕೊಠಡಿಗಳನ್ನು ಬಾಡಿಗೆಗೆ ಪಡೆದುಕೊಂಡು ವಾಸ ಮಾಡುವ ಕ್ರಮ ಇತ್ತು ಎಂದರೆ ಸರಿ. ವಾದಿ, 2ನೇ ಪ್ರತಿವಾದಿ 3ನೇ ವಾದಿ ಮತ್ತು ಬೇರೆ 3 ಜನ ಉಪಾನ್ಯಾಸಕರು ಕೊಠಡಿಯನ್ನು ಹಂಚಿಕೊಂಡು ವಾಸಮಾಡುತ್ತಿದ್ದರು ಎಂದರೆ ಅವರು 66ನೇ ಇಸವಿಯಲ್ಲಿ ಕೊಠಡಿಯನ್ನು ಹಂಚಿಕೊಂಡು ಒಟ್ಟಾಗಿ ಇದ್ದರು. 2ನೇಪ್ರತಿವಾದಿ ಮಣಿಪಾಲದಲ್ಲಿ ಡೆಮೋನಿಸ್ಟರ್ ಅಗಿ ಕೆಲಸಕ್ಕೆ ಸೇರಿದ ನಂತರ ಸಂಬಳ ಬರುತ್ತಿತ್ತು. ಅವರಿಗೆ ಎಷ್ಟು ಸಂಬಳ ಬರುತ್ತಿತ್ತು , ಎಷ್ಟು ಖರ್ಚು ಅಗುತ್ತಿತ್ತು ಎಷ್ಟು ಉಳಿಯುತ್ತಿತ್ತು ಎಂದು ನನಗೆಗೊತ್ತಿಲ್ಲ. ಉಳಿದ ವಾದಿಗಳು ಸಹಾ ಈ ವಿಚಾರವನ್ನು ಹೇಳಿರುವುದಿಲ್ಲ.

3ನೇ ಪ್ರತಿವಾದಿಯನ್ನು ಈ ವ್ಯಾಜ್ಯದಲ್ಲಿ ಎದುರುಪಕ್ಷಗಾರರನ್ನಾಗಿ ಮಾಡಲು ಕಾರಣ ಏನು ಎಂದರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನಗೂ, ಉಳಿದ ವಾದಿಗಳಿಗೂ, 3ನೇ ಪ್ರತಿವಾದಿಗೂ ಇವತ್ತಿನವರೆಗೂ ಯಾವುದೇ ಕಕ್ಷಿ ಇಲ್ಲ. ನಮ್ಮಲ್ಲಿ ಕಾರ್ಯಕ್ರಮಗಳು ಆದರೆ ಅವರು ಬರುತ್ತಾರೆ, ನಾವು ಹೋಗುತ್ತೇವೆ. ಅವರಿಗೆ ಈ ವ್ಯಾಜ್ಯದ ವಿಚಾರಗಳೆಲ್ಲಾ ಗೊತ್ತಿದೆ. 67ನೇ ಇಸವಿಯಲ್ಲಿ ನಾನು 9ನೇ ತರಗತಿಯಲ್ಲಿ

ಇದ್ದೆನು. ಸಾಮಾನ್ಯವಾಗಿ 16ನೇ ವಯಸ್ಸಿಗೆ ತಲುಪಿದ ನಂತರ ಲೋಕಜ್ಞಾನಗಳು ಸ್ವಲ್ಪ ಸ್ವಲ್ಪ ಬರಲು ಪ್ರಾರಂಭಿಸುತ್ತದೆ ಎಂದರೆ ಸರಿ. 67ನೇ ಇಸವಿಯಲ್ಲಿ ಕರಾರುಪತ್ರ ಅಗಿದೆ ಎಂದು ವಾದಪತ್ರದಲ್ಲಿ ಹೇಳಿರುವ ವಿಚಾರ ನನಗೆ ಸ್ವತಃ ಮಾಹಿತಿ ಇಲ್ಲ. ನನಗೆ ಅಣ್ಣಹೇಳಿರುತ್ತಾರೆ. ಆ ಕರಾರಿನ ವಿಚಾರ ಅಣ್ಣ ಯಾವಾಗ ಹೇಳಿದ್ದಾರೆಂದು ನೆನಪಿಲ್ಲ. ನನ್ನ ಅಣ್ಣನಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಲು ಮಾಂಸಖಂಡಗಳ ಬಲಹೀನತೆ, ಲಿವರ್‌ನ ಹುಣ್ಣುಗಳು, ಹೃದಯಬೇನೆ ಕಾಯಿಲೆಗಳು ಇರುತ್ತವೆ. ಮೇಲ್ಕಂಡ 3 ಕಾಯಿಲೆಗಳು 6-7 ವರ್ಷದಿಂದ ಇವೆ. ವ್ಯಾಜ್ಯ ಮಾಡುವ ಮೊದಲೇ2 ಕಾಯಿಲೆಗಳು ಇದ್ದವು. ಹಾರ್ಟ್‌ಎಟಾಕ್ ನಂತರ ಅಗಿರುತ್ತದೆ. ವಾದಪತ್ರಕ್ಕೆ ಸಹಿ ಮೈಸೂರಿನಲ್ಲಿ ಹಾಕಿರುತ್ತಾರೆ. ನಾನು ವ್ಯಾಜ್ಯದ ಕಾಗದ ಪತ್ರಗಳಿಗೆ ಮೈಸೂರಿನಲ್ಲಿ ಸಹಿ ಹಾಕಿರುತ್ತೇನೆ. ನ್ಯಾಯಾಲಯಕ್ಕೆ ಪ್ರಮಾಣಪತ್ರಗಳನ್ನು 1ನೇ ವಾದಿ ಕೃಷ್ಣ ಭಟ್ ಹಾಕಿರುತ್ತಾರೆ. ಆ ಸಮಯಕ್ಕೆ ಅವರಿಗೆ ನ್ಯಾಯಾಲಯಕ್ಕೆ ಬಂದು ಪ್ರಮಾಣಪತ್ರ ಸಲ್ಲಿಸಲು ಆಗುತ್ತಿತ್ತು. 1ನೇ ವಾದಿಗೆ ತಲೆ ಸರಿ ಇದೆ. ನ್ಯಾಯಾಲಯದಿಂದ ಅಯುಕ್ತರನ್ನು ನೇಮಿಸಿ ಸಾಕ್ಷ್ಯ ತೆಗೆದುಕೊಂಡರೆ ನೀಡುವ ಸ್ಥಿತಿಯಲ್ಲಿ ಇದ್ದಾರೆ. 67ನೇ ಇಸವಿಯ ಕರಾರುಪತ್ರ ನಾನು ನೋಡಿದ್ದೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರುಮಾಡಿದ್ದೇವೆ. ನ್ಯಾಯಾಲಯಕ್ಕೆ ವ್ಯಾಜ್ಯದಲ್ಲಿ ಹಾಜರುಮಾಡಿರುವ ದಾಖಲೆಗಳ ಬಗ್ಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿ ಈಗ ಹೇಳಲು ಅಗುವುದಿಲ್ಲ ಎಂದು ಹೇಳುತ್ತಾರೆ. ಈ ದಾಖಲಾತಿಗಳನ್ನು 1ನೇ ವಾದಿ ನನ್ನ ಅಣ್ಣ ಕೃಷ್ಣ ಕೊಟ್ಟಿರುತ್ತಾರೆ.ಆ ದಾಖಲೆಗಳನ್ನು ಈಗ್ಗೆ 5 ವರ್ಷಕ್ಕಿಂತ ಮುಂಚೆ ಕೊಟ್ಟಿರುತ್ತಾರೆ.ಇವತ್ತಿನಿಂದ 3 ವರ್ಷಗಳ ಹಿಂದೆ ಆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಮಾಡಿದೆ. ಆ ದಾಖಲೆಗಳನ್ನು ಸಾಕ್ಷಿಗೆ ತೋರಿಸಿ ಅವುಗಳ ಪೈಕಿ 10.5.67 ರಲ್ಲಿ ಅಗಿರುವ ಕರಾರುಪತ್ರ ಇದೆಯಾ ಎಂದು ಕೇಳಲಾಗಿ ಸಾಕ್ಷಿಪರಿಶೀಲಿಸಿ ಆ ದಾಖಲೆ ಇಲ್ಲ ಎಂದು ಹೇಳುತ್ತಾರೆ. ಎಷ್ಟು ಮೊತ್ತದ ಠಸ್ಸೆ ಕಾಗದದ ಮೇಲೆ ಬರೆದಿದ್ದಾರೆಂದು ನೆನಪಿಲ್ಲ. ಆ ರೀತಿ ಬರೆದ ಕರಾರು ಪತ್ರ ನಿಮ್ಮ ಅಣ್ಣ ತಮ್ಮಂದಿರ ಬಳಿ ಇರಬಹುದಾ ಎಂದರೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಈ ಬಗ್ಗೆ ನನ್ನ ಅಣ್ಣ ಏನೂ ಹೇಳಿಲ್ಲ. 10.5.67ರ ಕರಾರುಪತ್ರವನ್ನು ವಾದಪತ್ರವನ್ನು ತಯಾರಿಸುವ ಸಮಯದಲ್ಲಿ ವಕೀಲರಿಗೆ ತೋರಿಸಿರುತ್ತೇವೆ. ಅದರೆ

ವಕೀಲರಿಗೆ ಅದರ ಮೂಲ ಪ್ರತಿ ತೋರಿಸಿದ್ದೆವೆಯೋ ನಕಲು ಪ್ರತಿ ತೋರಿಸಿದ್ದೇವೆಯೋ ಹೇಳಲು ಬರುವುದಿಲ್ಲ. 10.5.67ರ ಕರಾರುಪತ್ರದ ಬಾಬ್ತು ಮಾರಾಟಗಾರರಿಗೆ ಹಣ ಏನಾದರೂ ಕೊಟ್ಟದ್ದೀರಾ ಎಂದರೆ ಸಾಕ್ಷಿ 750 ರೂ ಹಣ ಕೊಟ್ಟದ್ದೇವೆ ಎಂದು ಹೇಳುತ್ತಾರೆ. ಆ ಕರಾರುಪತ್ರದಲ್ಲಿ ಆ ಬಗ್ಗೆ ಉಲ್ಲೇಖ ಇದೆ. ಆ ಕರಾರುಪತ್ರದ ಕುರಿತು ಬೇರೆ ಏನಾದರೂ ವ್ಯವಹಾರ ಆಗಿದಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಆ ಕರಾರಿನ ಬಾಬ್ತು ಬೇರೆ ವ್ಯವಹಾರ ಆಗಿರುವ ಬಗ್ಗೆ ನನಗೆ ನೆನಪಿಲ್ಲ. ಆ ಕರಾರುಪತ್ರಕ್ಕೆ ಎಷ್ಟು ಜನ ಸಾಕ್ಷ್ಯ ಹಾಕಿದ್ದಾರೆ, ಯೂರು ಸಾಕ್ಷಿದಾರರಾಗಿ ಸಹಿ ಹಾಕಿದ್ದಾರೆ, ಯಾರು ಬರೆದಿದ್ದಾರೆಂದು ನೆನಪಿಲ್ಲ. ಈ ದಾವೆ ದಾಖಲು ಮಾಡುವ ಸಮಯಕ್ಕೂ ಆ ವಿಚಾರ ನನಗೆ ನೆನಪಿರಲಿಲ್ಲ. ವಾದ ಪತ್ರದಲ್ಲಿ ಉಲ್ಲೇಖಿಸಿರುವ ಕರಾರುಪತ್ರದ ಬಾಬ್ತು ನನಗೆ ಏನೂ ಮಾಹಿತಿ ಇಲ್ಲ ಎಂದರೆ ಸರಿ.

ಕರಾರುಪತ್ರ ಶಾಂಭವಿ ಮತ್ತು ಶ್ಯಾಮ್ ಭಟ್ ನಡುವೆ ಅಗಿರುತ್ತದೆ. ಅದು 3750 ರೂ ಹಣಕ್ಕೆ ಆಗಿರುತ್ತದೆ. ಮೇಲ್ಕಂಡ ಕರಾರುಪತ್ರದ ಹೊರತು ಬೇರೆ ಯಾವುದೇ ಕರಾರುಪತ್ರ ಆಗಿಲ್ಲ ಹಾಗೂ ಬೇರೆ ಯಾರ ಒಳಗೂ ಆಗಿಲ್ಲ.

ತಂದೆಯವರು ಪ್ರಾಯಸ್ಥರಾಗಿ ಸಹಜವಾಗಿ ತೀರಿಹೋಗಿರುತ್ತಾರೆ. ನಮ್ಮ ತಂದೆಯವರು ಆ ಕಾಲದಲ್ಲಿ ಯಜಮಾನರಾಗಿದ್ದರು. ಸಾಮಾನ್ಯವಾಗಿ ಕುಟುಂಬದ ಯಮಾನರೇ ಕುಟುಂಬದ ನಿರ್ವಹಣೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನಮ್ಮ ಕುಟುಂಬವನ್ನು ಸಾಕಲಿಕ್ಕೆ ತಂದೆಯವರೇ ನಿರ್ವಹಣೆ ಮಾಡುತ್ತಿದ್ದರು ಎಂರದೆ ಸಾಕ್ಷಿ 1ನೇ ವಾದಿ ನಿರ್ವಹಣೆ ಮಾಡುತ್ತಿದ್ದರು ಎಂದು ಹೇಳುತ್ತಾರೆ. 1ನೇವಾದಿ ನಮ್ಮ ಕುಟುಂಬವನ್ನು ನಿರ್ವಹಣೆ ಮಾಡುತ್ತಿದ್ದರು ಎಂದು ತೋರಿಸಲು ನನ್ನಲ್ಲಿ ಯಾವುದೇ ದಾಖಲೆ ಇಲ್ಲ. 1959 ರಿಂದ 96ರವೆರಗೆ 1ನೇ ವಾದಿ ಎಂಜಿಎಂ ಕಾಲೇಜು ಉಡುಪಿ ಫಿಲೋಮಿನ ಕಾಲೇಜು ಪುತ್ತೂರು, ವಿಜಯ ಕಾಲೇಜು ಮೂಲ್ಕಿಯಲ್ಲಿ ಪ್ರೊಫೇಸರ್ ಅಗಿಕೆಲಸ ಮಾಡುತ್ತಿದ್ದರು. 63ನೇ ಇಸವಿಯಲ್ಲಿ ವಿಜಯ ಕಾಲೇಜ್ ಮೂಲ್ಕಿಯಲ್ಲಿ ಖಾಯಂ ಅಗಿ ಕೆಲಸ ಮೂಡುತ್ತಿದ್ದರು. ಆ ಸಮಯದಲ್ಲಿ ಖಾಯಂ ಆಗಿ ಮೂಲ್ಕಿಯಲ್ಲಿ ವಾಸ ಇದ್ದರು ಎಂದರೆ ಸರಿ.1ನೇ ವಾದಿ ನಮ್ಮಕುಟುಂಬದ ನಿರ್ವಹಣೆ ನೋಡಿಕೊಳ್ಳುತ್ತಿರಲಿಲ್ಲ ಎಂದರೆ ಸರಿಯಲ್ಲ.

ಕ್ರಯಪತ್ರದಲ್ಲಿ 2ನೇಪ್ರತಿವಾದಿ ಹೆಸರು ಖರೀದಿದಾರನಾಗಿ ಇದೆ ಎಂದರೆ ಸರಿ. ಕ್ರಯಪತ್ರದ ಪ್ರಕಾರ 2ನೇ ಪ್ರತಿವಾದಿ ಉಪನೋಂದಣಾಧಿಕಾರಿಗಳ ಮುಂದೆ ಮಾರಾಟಗಾರರಿಗೆ 3ಸಾವಿರ ರೂ ಹಣ ಕೊಟ್ಟಿದ್ದಾರೆಂದರೆ ಸರಿ. ಕ್ರಯಪತ್ರದಲ್ಲಿ ಬರೆದಿರುವಂತೆ ಅದೇ ದಿನ ಖಾಸಾ ಸ್ವಾಧೀನವನ್ನು 2ನೇ ಪ್ರತಿವಾದಿ ಪಡೆದುಕೊಂಡಿರುತ್ತಾರೆಂದರೆ ಸರಿ. ಈ ಕ್ರಯಪತ್ರವನ್ನು ಈ ದಾವೆಯಲ್ಲಿ ಅಲ್ಲದೆ ಬೇರೆ ಯಾರೂ ಎಲ್ಲೂ ಪ್ರಶ್ನಿಸಿಲ್ಲ ಎಂದರೆ ಸರಿ. ಈ ಜಮೀನನ್ನು ಖರೀದಿ ಮಾಡುವ ಸಮಯಕ್ಕೆ ಜಮೀನಿನಲ್ಲಿ ಒಂದು ಮನೆ ಇತ್ತು ಎಂದರೆ ಸರಿ. ನಂತರ ಅದೇ ಜಮೀನಿನಲ್ಲಿ ಹೊಸದಾಗಿ ಬೇರೆ ಮನೆ ಅಗಿದೆ ಎಂದರೆ ಸರಿ. ನಿಪಿ-39ನ್ನು ಏಕೆಹಾಜರುಪಡಿಸಿದ್ದೀರಿ ಎಂದರೆ ಮನೆ ಕಟ್ಟುವ ಕುರಿತು ಪರವಾನಿಗೆ ಪಡೆದುದಕ್ಕಾಗಿ ಹಾಜರುಪಡಿಸಿರುತ್ತೇವೆ. ನಿಪಿ-39ರ ಪ್ರಕಾರ 2ನೇ ಪ್ರತಿವಾದಿ ಮನೆ ಕಟ್ಟಿರುತ್ತಾರೆ. ಆ ಮನೆಯಲ್ಲಿ 2ನೇಪ್ರತಿವಾದಿ ಬಾಡಿಗೆಗೆ ಕೊಟ್ಟಿರುವುದು ಗೊತ್ತಿದೆ. ಯಾರಿಗೆ ಎಷ್ಟು ಸಮಯದಿಂದ ಅ ಮನೆಯನ್ನು ಬಾಡಿಗೆಗೆ ಕೊಟ್ಟಿದ್ದಾರೆಂದು ಗೊತ್ತಿಲ್ಲ. ಆ ಮನೆಯಿಂದ ಬರುವ ಬಾಡಿಗೆಯನ್ನು ಶ್ಯಾಮ್‌ಭಟ್ ರವರೇ ಪಡೆದುಕೊಳ್ಳುತ್ತಾರೆಂದರೆ ಸರಿ. ಆ ಮನೆ ಕಟ್ಟಿದ ಬಗ್ಗೆ 2ನೇಪ್ರತಿವಾದಿ ಮಾಡುತ್ತಿದ್ದಾರೆಂದು ನಾನು ತಿಳಿದುಕೊಂಡಿಲ್ಲ. 2ನೇಪ್ರತಿವಾದಿ ಅವರ ಸ್ವಂತ ಉತ್ಪತ್ತಿಯಿಂದ ಆ ಮನೆಯನ್ನು ಕಟ್ಟಿದ್ದಾರೆಂದರೆ ಸರಿಯಲ್ಲ. ಮನೆಕಟ್ಟಲು ಎಷ್ಟುಖರ್ಚು ಅಗಿದೆ ಎಂದು ತೋರಿಸಲು ನಮ್ಮ ಬಳಿ ದಾಖಲೆ ಇಲ್ಲ. ನಮ್ಮ ತಂದೆಯವರ ಕುರಿತಾಗಿ ನಾವುಗಳೆಲ್ಲಾ ಒಂದು ಪುಸ್ತಕ ಬರೆಯಲು ಪ್ರಾರಂಭಿಸಿದ್ದೆವು. ಎಲ್ಲಾ ಮಕ್ಕಳುಗಳು ಅದಕ್ಕೆ ತಮ್ಮ ತಮ್ಮ ಅಭಿಪ್ರಾಯ ಬರೆದುಕೊಟ್ಟಿದ್ದಾರೆ. ಸಾಕ್ಷಿಗೆ ಎಲ್ಲಾ ಮಕ್ಕಳುಗಳು ಬರೆದುಕೊಟ್ಟಿರುವ ಅವರ ಅಭಿಪ್ರಾಯಗಳನ್ನು ತೋರಿಸಲಾಗಿ ಅದರ ಮೂಲ ಪ್ರತಿ 1ನೇ ವಾದಿ ಬಳಿ ಇದ್ದು ವಾದಿ ನೋಡಿ ಒಪ್ಪಲಾದ ದಾಖಲೆ ನಕಲು ಪ್ರತಿ ಅದ್ದರಿಂದ ನಿಶಾನೆಯಾಗಿ ಗುರ್ತಿಸಿರುವುದಿಲ್ಲ. ಅದರ ಮೂಲ ಪ್ರತಿ 1ನೇ ವಾದಿಯಿಂದ ನ್ಯಾಯಾಲಯಕ್ಕೆ ಹಾಜರುಪಡಿಸಲು ಸಾಧ್ಯವಾಗುತ್ತದಾ ಎಂದರೆ ಈಗ ಅವರ ಬಳಿ ಇದೆಯೋಇಲ್ಲವೋ ಗೊತ್ತಿಲ್ಲ ಎಂದು ಹೇಳುತ್ತಾರೆ. ಈ ವಿಷಯಗಳೆಲ್ಲಾ ಅಂತರ್ಜಾಲದಲ್ಲಿ ಪ್ರಕಟಣೆ ಅಗಿದೆ ಎಂದರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾವು ನಮ್ಮ ತಂದೆಯ ಬಗ್ಗೆ ನೀಡಿರುವ

ಅಭಿಪ್ರಾಯಗಳು ಯಾವುದೂ ಸುಳ್ಳಲ್ಲ. ನಮ್ಮ ತಂದೆಯ ಬಗ್ಗೆ ಎಲ್ಲಾ ಮಕ್ಕಳುಗಳು ಬರೆದಿರುವ ಅನಿಸಿಕೆಗಳು, ಅಭಿಪ್ರಾಯಗಳು ನಮ್ಮ ಬಳಿ ಇದ್ದರೂ ಅದನ್ನು ಉದ್ದೇಶಪೂರ್ವಕವಾಗಿ ಹಾಜರುಪಡಿಸುತ್ತಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯವರ ಬಗ್ಗೆ ಮಕ್ಕಳುಗಳು ಬರೆದಿರುವ ಅಭಿಪ್ರಾಯಗಳಲ್ಲಿ **ವಾಸ್ತವ್ಯ ಮನೆಯನ್ನು ಪರಿತ್ಯಜಿಸಿ ತಮ್ಮ ಶ್ಯಾಮನು ಕ್ರಯಕ್ಕೆ ಪಡೆದ ಪೆರಾಜಿ ಪರ್ಣಕುಟಿಗೆ ನಮ್ಮ ವಾಸ್ತವ್ಯವನ್ನು ಬದಲಾಯಿಸಿದೆವು ಎಂದರೆ ಗೊತ್ತಿಲ್ಲ ಎಂದು ಹೇಳುತ್ತಾರೆ.** (ಪ್ರತಿವಾದಿ ಪರ ವಕೀಲರು ಸದ್ರಿ ಒಪ್ಪಿದ ಭಾಗವನ್ನು ನಿಶಾನೆಯಾಗಿ ಗುರ್ತಿಸಿಕೊಳ್ಳಬೇಕಾಗಿ ಮನವಿ ಮಾಡಿದ್ದು ಅದರ ಮೂಲ ಪ್ರತಿ ನ್ಯಾಯಾಲಯದ ಮುಂದೆ ಇಲ್ಲದ ಕಾರಣ ನಕಲು ಪ್ರತಿ ಅಗಿರುವುದರಿಂದ ಅವರ ಮನವಿಯನ್ನು ತಿರಸ್ಕರಿಸಿದ ಸದ್ರಿ ಒಪ್ಪಿದ ಭಾಗವನ್ನುನಿಶಾನೆಯಾಗಿ ಗುರ್ತಿಸಿರುವುದಿಲ್ಲ) ವ್ಯಾಜ್ಯ ದಾಖಲು ಮಾಡುವ ಸಮಯಕ್ಕೆ ನಮ್ಮ ತಂದೆಯವರ ಬಗ್ಗೆ ಮಕ್ಕಳುಗಳು ವ್ಯಕ್ತ ಪಡಿಸಿರುವ ಅಭಿಪ್ರಾಯಗಳ ದಾಖಲೆಯನ್ನು ವಕೀಲರಿಗೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ನೆನಪಿಲ್ಲ ಎಂದುಹೇಳುತ್ತಾರೆ. ಈ ಪುಸ್ತಕದ ಬಗ್ಗೆ ಎಲ್ಲಾ ಅಣ್ಣಂದಿರಿಗೂ ನನಗಿಂತ ಹೆಚ್ಚಿನ ಮಾಹಿತಿ ಇದ್ದು ಅವರು ನ್ಯಾಯಾಲಯಕ್ಕೆ ಬಂದರೆ ಅದರ ಬಗ್ಗೆ ಹೇಳಬಹುದು. ವಾದಿ ಮತ್ತು ಪ್ರತಿವಾದಿಗಳಿಗೆ ಆ ಪುಸ್ತಕದ ಬಗ್ಗೆ ಸ್ಪಷ್ಟ ಮಾಹಿತಿ ಇದೆ ಎಂದರೆ ಅದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಪುಸ್ತಕ ಬರೆದ ವಿಚಾರ ಗೊತ್ತಿದೆ. ಉಳಿದ ಅಣ್ಣ ತಮ್ಮಂದಿರಿಗೂ ಪುಸ್ತಕ ಬರೆದ ವಿಚಾರ ಗೊತ್ತಿದೆ. ಎಲ್ಲಾ ಅಣ್ಣ ತಮ್ಮಂದಿರೂ ಪುಸ್ತಕ ಬಗ್ಗೆ ಓದಿ ತಿಳಿದುಕೊಂಡಿದ್ದೀರಾ ಎಂದರೆ ನೆನಪಿಲ್ಲ ಎಂದು ಹೇಳುತ್ತಾರೆ. ನಾನು ಓದಿದ್ದು ನನಗೆ ನೆನಪಿಲ್ಲ. ನಮ್ಮ ತಂದೆಗೆ ಸಂಬಂಧಪಟ್ಟ ಪುಸ್ತಕದಲ್ಲಿ ನನ್ನ ಅಣ್ಣ ತಮ್ಮಂದಿರು ಸುಳ್ಳು ಬರೆದಿಲ್ಲ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು.

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

**ಪ್ರಧಾನ ಸಿವಿಲ್‌ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ ಬಂಟ್ವಾಳ, ದ.ಕ.**